(ಅನುಬಂಧ–1)

ಅಧ್ಯಕ್ಷರು:– ಇವತ್ತು ಪ್ರಶ್ನೋತ್ತರ ವೇಳೆ ಎರಡು ಗಂಟೆಗಳಿಗಿಂತ ಹೆಚ್ಚು ಸಮಯ ನಡೆದಿದೆ. ಒಟ್ಟು ಮೂರು ಗಂಟೆಗಳ ಕಾಲ ಆಯಿತು. ನಾಳೆಯಿಂದ ಒಂದೂವರೆ ಗಂಟೆಗಳ ಸಮಯದೊಳಗೆ ಪ್ರಶ್ನೋತ್ತರ ಮುಗಿಸಲಿಕ್ಕೆ ಸಹಕಾರ ಕೊಡಬೇಕೆಂದು ಎಲ್ಲಾ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

3. ಹಕ್ಕುಚ್ಯುತಿ ಪ್ರಸ್ತಾವ

ವಿಷಯ: ಶ್ರೀ ಸಿ.ಟಿ. ರವಿಯವರ ವಿರುದ್ಧ ಜನಶ್ರೀ ವಾಹಿನಿಯಲ್ಲಿ ವರದಿಯಾಗಿರುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ಶಾಸಕನಾಗಿ ಕೆಲಸ ಮಾಡುವುದಕ್ಕೆ ಕಷ್ಟವಾಗುವಂಥ ಸ್ಥಿತಿ ನನಗೆ ನಿರ್ಮಾಣವಾಗಿದೆ. ಅದಕ್ಕಾಗಿ ಹಕ್ಕುಚ್ಯುತಿ ಪ್ರಸ್ತಾಪಿಸಲಿಕ್ಕೆ ತಮ್ಮ ಅನುಮತಿಯನ್ನು ಕೋರಿದ್ದೆ. ತಾವು ಅನುಮತಿ ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಹೇಗೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ಇವೆಯೋ ಹಾಗೆಯೇ ಮಾಧ್ಯಮ ವಲಯವನ್ನೂ ಕೂಡ ನಾಲ್ಕನೇ ಅಂಗವೆಂದು ಪರಿಗಣಿಸಿದ್ದಾರೆ. ಅಧಿಕೃತವಾಗಿ ಅಲ್ಲದಿದ್ದರೂ ಕೂಡ ಪ್ರಜಾಪ್ರಭುತ್ವ ವ್ಯವಸ್ಥೆ ಚೆನ್ನಾಗಿ ಆಗಲಿಕ್ಕೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದಷ್ಟೇ ಬದ್ಧತೆಯನ್ನು ಪತ್ರಿಕಾರಂಗ, ಮಾಧ್ಯಮವೂ ಇಟ್ಟುಕೊಂಡು ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬಬೇಕೆನ್ನುವಂಥ ಹಿನ್ನೆಲೆಯಲ್ಲಿ ಈ ಮಾಧ್ಯಮ ರಂಗಕ್ಕೂ ಕೂಡ ಜವಾಬ್ದಾರಿ ವಹಿಸಿರುವುದನ್ನು ನಾವು ನೋಡುತ್ತೇವೆ. ದುರ್ದೈವವೆಂದರೆ ಕಳೆದ ತಿಂಗಳ 22, 23, 24 ರಂದು ಮೂರು ದಿನಗಳ ಕಾಲ ನನ್ನ ವಿರುದ್ಧ 'ಜನಶ್ರೀ'

ವಾಹಿನಿಯಲ್ಲಿ ತನಿಖಾ ವರದಿ ಹೆಸರಿನಲ್ಲಿ ಒಂದು ವಿಚಾರ ಪ್ರಸ್ತಾಪವಾಯಿತು. ಯಾವುದೇ ರೀತಿಯ ಅಪರಾಧ ಮಾಡದಿದ್ದರೂ, ನನ್ನದೇನೂ ಅಪರಾಧ ಇಲ್ಲದಿದ್ದರೂ ತಳಕು ಹಾಕಿ ನನ್ನ ತೇಜೋವಧೆ ಮಾಡತಕ್ಕಂಥ ಮತ್ತು ಶಾಸಕನಾಗಿ ಕರ್ತವ್ಯ ಮಾಡುವುದಕ್ಕೆ ಸಂಶಯ ಹುಟ್ಟಿಸುವ ರೀತಿಯಲ್ಲಿ ಬಿಂಬಿಸುವ ಕೆಲಸ ನಡೆಯಿತು. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2008ರಲ್ಲಿ ಹಿರೇಮಗಳೂರಿನ ಒಂದು ಕೆರೆಯನ್ನು water park ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿತ್ತು. ಆ ರೀತಿ ನಿರ್ಣಯ ತೆಗೆದುಕೊಂಡು water park ಗೆ ಅನುಮತಿ ಕೊಡಿ ಎಂದು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿತು. 2001ರಲ್ಲಿ Supreme Court ನಿಂದ ಆದೇಶವಾಗಿದ್ದು ಸಣ್ಣ ನೀರಾವರಿ ಇಲಾಖೆಯ ಯಾವುದೇ ಕೆರೆಗಳನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವುದಕ್ಕೆ ಅನುಮತಿ ಕೊಡುವುದಿಲ್ಲ ಎಂದು water park ಮಾಡಬೇಕೆಂಬ ಪ್ರಸ್ತಾವನೆಗೆ ಅವಕಾಶ ಕೊಡುವುದಿಲ್ಲವೆಂದು ರದ್ದುಪಡಿಸಿ ಸರ್ಕಾರದಿಂದ ವಾಪಸ್ಸು ಉತ್ತರ ಬಂತು. ಆ ರೀತಿ ರದ್ದುಪಡಿಸಿದ್ದು ಸರ್ಕಾರದ, Supreme Court ನ ತೀರ್ಪಿನ ಹಿನ್ನೆಲೆಯಲ್ಲಿ. ಅದಕ್ಕೆ ಸಂಬಂಧಪಟ್ಟಂತೆ ಆ ಜಮೀನು ಯಾವುದೇ 4(1), 6(1) notification ಆಗಿರಲಿಲ್ಲ. ಅದಾದಮೇಲೆ ಇನ್ನೊಬ್ಬ ಮೂರನೆಯವರು ನನ್ನ ದೂರದ ಸಂಬಂಧಿಕ ಎರಡು ವರ್ಷಗಳ ನಂತರ ಆ ಜಮೀನನ್ನು ಕೊಂಡುಕೊಂಡಿದ್ದಾರೆ. ಅವರು ನನ್ನ ಹತ್ತಿರದ ಸಂಬಂಧಿಯಲ್ಲ, ಮತ್ತು ಆ ವ್ಯವಹಾರಕ್ಕೂ ನನಗೂ ಏನೂ ಸಂಬಂಧವಿಲ್ಲ. ಆದರೆ, ಇಲ್ಲಿ ಭೂಕಬಳಿಕೆ ಮಾಡುವ ಉದ್ದೇಶದಿಂದಲೇ water park ಮಾಡಬೇಕೆನ್ನುವ ಪ್ರಸ್ತಾವನೆ ಕಳುಹಿಸಿ ಆ ನೆಪದಲ್ಲಿ ಭೂಮಿಯನ್ನು ಕಬಳಿಸಿದ್ದಾರೆ ಎಂದು ನನ್ನ ಮೇಲೆ ಆರೋಪ ಹೊರಿಸಿ ಆ ನಿರ್ಣಯವನ್ನು ತಿರುಚಿ ಹೇಳುವಂಥ ಕೆಲಸ ಒಂದು ಕಡೆ ನಡೆಯಿತು. ಇನ್ನೊಂದು ಕಡೆ 2007ರಲ್ಲಿ ನಾನು ಮತ್ತು ನನ್ನ ಪತ್ನಿ ಒಂದು ಜಮೀನು ಖರೀದಿ ಮಾಡಿದ್ದೆವು. ಆ ಜಮೀನು CDP Plan ನ ವಾಣಿಜ್ಯ ವಲಯದ ವ್ಯಾಪ್ತಿಯೊಳಗಡೆ ಇತ್ತು. ಆ ಭೂಮಿಯನ್ನು conversion ಮಾಡಿದ್ದರು.

Conversion ಮಾಡಿರುವುದನ್ನು ಇವರು ತೋರಿಸಬೇಕಾದರೆ, ಏನು ತೋರಿಸಿದ್ದಾರೆಂದರೆ, ನಾನು ಯಾವುದೋ ಒಂದು ಸಂದರ್ಭದಲ್ಲಿ ಚಿಕ್ಕಮಗಳೂರನ್ನು ಪ್ರವಾಸೋದ್ಯಮವಾಗಿ ಅಭಿವೃದ್ಧಿಪಡಿಸಬೇಕೆಂದು ಮಾತನಾಡಿರುವ clippings ಹಾಕಿ ತೋರಿಸಬೇಕಾದರೆ, ನೋಡಿ ಪ್ರವಾಸೋದ್ಯಮಕ್ಕಾಗಿ ಮೀಸಲಿಟ್ಟ ಜಾಗವನ್ನು ಹೇಗೆ commercial ಗೆ ಶಾಸಕರು ಖರೀದಿ ಮಾಡಿದ್ದಾರೆ ಎಂದು ಹೇಳಿ, ಅದಕ್ಕೆ ನಾನು RSS ಪಥಸಂಚಲನದಲ್ಲಿ ಪಾಲ್ಗೊಂಡಿರುವ photo ಲಗತ್ತಿಸಿ ದೇಶಭಕ್ತಿಯ pose ಕೊಡುವವರು ಇವರು ಹೇಗೆ ಪ್ರವಾಸೋದ್ಯಮಕ್ಕೆ ಮೀಸಲಿಟ್ಟಿರುವ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆ ಮಾಡಿದ್ದಾರೆಂದು ತೋರಿಸಿದರು. ಅಂದರೆ, ಜನರ ದೃಷ್ಟಿಯಲ್ಲಿ ನಾವು ಸರ್ಕಾರಿ ಜಾಗವನ್ನು ಕಬಳಿಸಿದ್ದೇವೆಂದು ತೋರಿಸಿದ್ದಾರೆ. ನಾನು ಶಾಸಕನಾಗುವುದಕ್ಕಿಂತ ಮುಂಚೆ ಈ ದೇಶದ ಪ್ರಜೆ. ಈ ದೇಶದ ಪ್ರಜೆಯಾಗಿ, ಕಾನೂನು ಬದ್ಧವಾಗಿ ಎಲ್ಲಾ ಸೌಲಭ್ಯಗಳನ್ನು ಅನುಭವಿಸುವ ಹಕ್ಕು ನನಗಿದೆ. ಹಣ ಕಟ್ಟಿ ಕಾನೂನು ಬದ್ಧವಾಗಿ commercial ಗೆ conversion ಮಾಡಿರುವುದನ್ನು ಅಪರಾಧವೆಂದು ಬಿಂಬಿಸುವ ಕೆಲಸವನ್ನು ಈ ಮಾಧ್ಯಮದ ಮೂಲಕ ಮಾಡಿರುವ ಮೂಲಕ ನನ್ನ ತೇಜೋವಧೆ ಆಗಿದೆ. ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹೋಗಿ ಅಲ್ಲಿ ಕೆಲಸ ಮಾಡುವುದಕ್ಕೆ ಇರಬಹುದು, ನಗರಸಭೆಯಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಇರಬಹುದು ನಾನು ನ್ಯಾಯವಾಗಿ ಹೇಗೆ ಕೆಲಸ ಮಾಡಬೇಕು? ನಾನು ತಪ್ಪು ಮಾಡಿದ್ದರೆ ತನಿಖೆ ನಡೆಸಿ ನನ್ನನ್ನು ಗಲ್ಲಿಗೆ ಹಾಕಿ, ನಾನು ಅನುಭವಿಸುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ, ಉದ್ದೇಶಪೂರ್ವಕವಾಗಿ ಮಾನಹಾನಿ ಮಾಡುವ ಹಾಗೆ ಚಿತ್ರಿಸುವುದನ್ನು ಮತ್ತು ತನಿಖಾ ವರದಿ ಎಂದು ಪ್ರಕಟ ಮಾಡಿದ ಮೇಲೆ ಜವಾಬ್ದಾರಿ ಅವರಿಗೂ ಇದೆಯಲ್ಲವೇ? ನಾನು ಅಪರಾಧ ಮಾಡಿದ್ದರೆ ನನ್ನ ಮೇಲೆ ದೂರು ಸಲ್ಲಿಸಿ ನನಗೆ ಯಾವ ರೀತಿ ಬೇಕಾದರೂ ಶಿಕ್ಷೆ ವಿಧಿಸಲಿ. ಆದರೆ, ನಾನು ಏನೂ ಅಪರಾಧ ಮಾಡದೇ ಸಾರ್ವಜನಿಕರಲ್ಲಿ ಸಂಶಯದ ಬೀಜ ಬಿತ್ತುವ, ಸಾರ್ವಜನಿಕರ ದೃಷ್ಟಿಯಲ್ಲಿ

ಅಪರಾಧ ಮಾಡಿದ್ದಾರೆಂದು ಬಿಂಬಿಸುವ ಪ್ರಯತ್ನವನ್ನು ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ನಾನು 30 ವರ್ಷಗಳಿಂದ ಸಾರ್ವಜನಿಕ ಕ್ಷೇತ್ರದಲ್ಲಿದ್ದೇನೆ. ನಾನು ವಿದ್ಯಾರ್ಥಿ ದಿಶೆಯಿಂದಲೂ ಕೂಡ ವಿವಿಧ ಜವಾಬ್ದಾರಿ ಹೊತ್ತು ಸಾರ್ವಜನಿಕವಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಹತ್ತಿರ ಏನು ವಿಷಯ ಎಂದು ಒಂದು ಸಣ್ಣ clarification ಸಹ ಕೇಳಲಿಲ್ಲ. ಇಲ್ಲವೇ, ಜಮೀನನ್ನು ಮಾರಿರುವವರ ಹತ್ತಿರವೂ ಕೇಳಲಿಲ್ಲ, ಜಮೀನನ್ನು ಕೊಂಡಿರುವವರ ಹತ್ತಿರವೂ ಏನು ವಿಷಯ ಎಂದು ಕೇಳಲಿಲ್ಲ, ಸರ್ಕಾರಿ ಅಧಿಕಾರಿಗಳ ಹತ್ತಿರವೂ ಏನು ವಿಷಯ ಎಂದು ಕೇಳಲಿಲ್ಲ. ಆದರೆ, ಒಂದು story build ಮಾಡಿ ಆ story ಅನ್ನು ತೋರಿಸುವ ಕೆಲಸ ನಡೆದಿರುವುದು ನನಗೆ ನೋವುಂಟುಮಾಡಿದೆ ಮತ್ತು ನಾನು ಈ ಸ್ಥಿತಿಯಲ್ಲಿ ಕೆಲಸ ಮಾಡುವುದು ಹೇಗೆ? ನಾಳೆ ನಾನು ಆಶ್ರಯ ಸಮಿತಿ ಸಭೆ ನಡೆಸಿದರೂ ಅದಕ್ಕೂ ಏನಾದರೊಂದು ಹೇಳಬಹುದು. ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಯಾವ ನಿರ್ಣಯವಾದರೂ ಆ ನಿರ್ಣಯಕ್ಕೆ ತಳಕು ಹಾಕಿ ಇನ್ನೇನೋ ಅಪರಾಧ ಎಂದು ಬಿಂಬಿಸುವ ಕೆಲಸ ಮಾಡಬಹುದು. ಇದರಿಂದ ನನಗೆ ತುಂಬಾ ನೋವಾಗಿದೆ. ಹಿಂದೆ ಮಾಧ್ಯಮ ಎಂದರೆ ಬಹಳ ethics ಇರುವವರು ಮಾಧ್ಯಮಕ್ಕೆ ಬರುವ ವ್ಯವಸ್ಥೆ ಇತ್ತು. ಆದರೆ, ಇವತ್ತು ಅದೊಂದು industry ಅಥವಾ ಉದ್ದಿಮೆ. ಅದು ಉದ್ದಿಮೆಯಾಗಿರುವುದರಿಂದ invest ಮಾಡಿ ಲಾಭ ಪಡೆಯುವುದೇ ಮುಖ್ಯ ಉದ್ದೇಶವಾಗಿ ಬಹಳ ಜನ ಬದಲಾಗಿದ್ದಾರೆ, ಎಲ್ಲರೂ ಎಂದು ನಾನು ಹೇಳುವುದಿಲ್ಲ. ಆದರೆ, ಬಹಳ ಜನರಿಗೆ ಅದು investment ಅಷ್ಟೇ. ಯಾವ ಮೂಲದ್ದಾದರೂ number 2 ಇದ್ದರೂ ಅದು investment ಮಾಡಿ ಅದರಿಂದ ಹೆಚ್ಚು ಲಾಭ ಪಡೆಯತಕ್ಕಂಥ ಉದ್ದಿಮೆಯಾಗಿ ಬದಲಾಗಿದೆ. ಆಮೇಲೆ ನನಗೆ ತಿಳಿದು ಬಂದಿದ್ದು ಏನೆಂದರೆ, ಈ ರೀತಿ package news ಇರುತ್ತವೆಯಂತೆ. ಈ ರೀತಿಯ news ಮಾಡುವುದಕ್ಕಾಗಿಯೇ package system ಇದೆಯಂತೆ. ಆ package system ಮೂಲಕ ಯಾರಿಗೂ ಯಾವ ethics ಇಲ್ಲದೇ ಯಾರ ಬಗ್ಗೆ ಬೇಕಾದರೂ ದುರುದ್ದೇಶವಾದ

ಆಪಾದನೆ ಹೊರಿಸಿ ಅವರ ಮೇಲೆ ಅಪರಾಧಿ ಎಂದು ಬಿಂಬಿಸಿ ಆ ಮೂಲಕ ಹಣ ಮಾಡುವ ದಂಧೆಗಳಾಗಿ ಪರಿವರ್ತನೆಯಾಗಿರುವ ಹಿನ್ನೆಲೆಯಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕು ಮತ್ತು ನಾನು ಕೆಲಸ ಮಾಡಲಿಕ್ಕೆ, ನನ್ನ ಹಕ್ಕಿಗೆ ಚ್ಯುತಿಯಾಗಿರುವ ಕಾರಣಕ್ಕೋಸ್ಕರ ಇದನ್ನು ಹಕ್ಕುಚ್ಯುತಿ ಸಮಿತಿಗೆ ವಹಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

ಹಿಂದೆ ಕೋತಿ ಕರಡಿ ಆಡಿಸುವ ಆಟದ ವ್ಯವಸ್ಥೆ ಇತ್ತು, ಜನರು ಸೇರುತ್ತಿದ್ದರು, ನೋಡುತ್ತಿದ್ದರು. ಇವತ್ತು ಒಂದು ರೀತಿಯಲ್ಲಿ ಬಹಳ ಮಾಧ್ಯಮಗಳಲ್ಲಿ ಈ ಕೋತಿ ಕರಡಿಯಾಟಕ್ಕಿಂತಲೂ TRP ಜಾಸ್ತಿ ಮಾಡಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಯಾರ ಮೇಲೆ ಏನು ಬೇಕಾದರೂ ಆಪಾದನೆ ಮಾಡಿ, ಏನು ಬೇಕಾದರೂ ಸುಳ್ಳು ಸುದ್ದಿಗಳನ್ನು ಬಿತ್ತರಿಸಿ TRP ಜಾಸ್ತಿ ಮಾಡಿಕೊಳ್ಳುವ ಒಂದೇ ಒಂದು ಉದ್ದೇಶ ಇದೆ. ಸುದ್ದಿಯನ್ನು ತಿರುಚಿ ಹಾಕುವ ಒಂದೇ ಒಂದು ಉದ್ದೇಶವಿದೆ. ಎಲ್ಲಾ ನಿಯಮಗಳ ಚೌಕಟ್ಟನ್ನು ಮೀರಿ ನಡೆಯುತ್ತಿರುವುದನ್ನು ಕೂಡ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇವಲ ರಾಜಕೀಯ ವಿರೋಧಿಗಳ ಹೇಳಿಕೆಯನ್ನೇ ಆಧರಿಸಿ ವಾಸ್ತವಾಂಶಗಳನ್ನು ತಿಳಿದುಕೊಳ್ಳದೆ ಅದರಿಂದ ಆಗಬಹುದಾದ ವ್ಯಕ್ತಿಗತ ಹಾನಿ, ಸಾಮಾಜಿಕ ಹಾನಿ, ಜವಾಬ್ದಾರಿಗೆ ಸಂಬಂಧಪಟ್ಟಂತೆ ಆಗಬಹುದಾದಂಥ ಹಾನಿಯನ್ನೂ ಪರಿಗಣಿಸದೆ ಆರೋಪ ಮಾಡುತ್ತಾರೆ. ಇದರ ಬಗ್ಗೆ ನಿಯಂತ್ರಣ ತರುವ ಬಗ್ಗೆ ಯೋಚಿಸುವ ಅವಶ್ಯಕತೆ ಇದೆ ಎಂದು ಹೇಳಬಯಸುತ್ತೇನೆ. ನಾನು ಬಹಳ ಜನರನ್ನು ಕೇಳಿದೆ. ನಮಗೂ ಹೀಗೆ ಆಗಿದೆ ಮಹಾರಾಯ ಎಂದು ಹೇಳಿದರು. ಆದರೆ, ಅವರ್ಯಾರೂ ತಮಗೇಕೆ ಉಸಾಬರಿ ಎನ್ನುವ ಸ್ಥಿತಿಯಲ್ಲಿ ಇರಬೇಕಾದರೆ, ನನಗೆ ವೈಯಕ್ತಿಕವಾಗಿ ಹಾನಿಯಾದರೂ ಪರವಾಗಿಲ್ಲ, ನನ್ನನ್ನು ಪೂರ್ವಾಗ್ರಹದಿಂದ ಮನಸ್ಸಿನಲ್ಲಿಟ್ಟುಕೊಂಡು ಮತ್ತಷ್ಟು target ಮಾಡಿದರೂ ಪರವಾಗಿಲ್ಲ, ಆದರೆ, ಮಾಧ್ಯಮರಂಗ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಲಿಕ್ಕೆ ತನ್ನ ಜಬಾಬ್ದಾರಿಯನ್ನು

ಹೊರಬೇಕಾಗಿತ್ತೋ ಆ ಜವಾಬ್ದಾರಿ ಮರೆತು ಈ ರೀತಿ ತೇಜೋವಧೆಯನ್ನು ಗುರಿಯಾಗಿಟ್ಟುಕೊಂಡು package ಗಳ ಕಡೆಗೆ ಹೊರಟಿರುವುದು, package news ಗೆ ಮಹತ್ವ ಕೊಟ್ಟು ಆ ಮೂಲಕ ರಾಜಕೀಯ ವಿರೋಧಿಗಳ instrument ಆಗಿ ಕೆಲಸ ಮಾಡುತ್ತಿರುವ ಹಿನ್ನೆಲೆಯಲ್ಲಿ ನಾನು ಶಾಸಕನಾಗಿ ಕರ್ತವ್ಯ ಮಾಡುವುದು ಕಷ್ಟವಾಗಿದೆ. ಇದಕ್ಕಂತ ಮುಂಚೆ ನವೆಂಬರ್ 13 ರಂದು ಇದೇ TV ಯಲ್ಲಿ ಪ್ರಕಟ ಮಾಡಿದ್ದರು. ಯಾವ ಸೈಟನ್ನು ಸಾರ್ವಜನಿಕವಾಗಿ ಸಾಲಮೇಳದಲ್ಲಿ ಕೊಂಡಿದ್ದೇವೆ ಅದನ್ನು ಭೂ ಕಬಳಿಕೆ ಎಂದು ತೋರಿಸಿದರು. ಸಾಲಮೇಳದಲ್ಲಿ ಕೊಂಡಿರುವುದು, ಬೇಲಿ ಹಾಕಿರುವುದಲ್ಲ, ಕದ್ದು ಬೇಲಿ ಹಾಕಿರುವುದಲ್ಲ, ಅಥವಾ ಕದ್ದು ಖಾತೆ ಮಾಡಿಸಿಕೊಂಡಿರುವುದಲ್ಲ. ಯಾವುದನ್ನೂ auction ನಲ್ಲಿ ಕೊಂಡಿರುತ್ತೇವೆ, ಸಾಲಮೇಳದಲ್ಲಿ ಕೊಂಡಿರುತ್ತೇವೆ, ಅದು ಭೂ ಕಬಳಿಕೆ ಎಂದರೆ, ಅಂದರೆ legal ಆಗಿ ದುಡ್ಡು ಕೊಟ್ಟು ಕೊಳ್ಳುವುದೂ ಕೂಡ ಒಂದು ಅಪರಾಧವೆ? ಆ ರೀತಿ ಚಿತ್ರಿಸತಕ್ಕಂಥ ಈ ರೀತಿ ಬಿಂಬಿಸತಕ್ಕಂಥ ಪ್ರಯತ್ನ ನಡೆದಿರುವುದರಿಂದ ಮತ್ತು ನನಗೆ ಶಾಸಕನಾಗಿ ಕರ್ತವ್ಯ ನಿರ್ವಹಿಸುವುದಕ್ಕೂ ಕೂಡ ಅಡಚಣೆಯಾಗಿರುವುದರಿಂದ ನನ್ನ ಹಕ್ಕಿಗೆ ಚ್ಯುತಿ ಬಂದಿರುವುದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ವಹಿಸಬೇಕೆಂದು ನಾನು ವಿನಂತಿ ಮಾಡಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಸದಸ್ಯರಾದ ಸಿ.ಟಿ.ರವಿಯವರು ನಿಯಮ 192 ರ ಅಡಿಯಲ್ಲಿ ಹಕ್ಕುಚ್ಯುತಿ ಪ್ರಸ್ತಾಪಿಸಲು ಅನುಮತಿ ಕೋರಿ ಒಂದು ದೃಶ್ಯವಾಹಿನಿಯಲ್ಲಿ, ತನಿಖಾ ವರದಿ ಶೀರ್ಷಿಕೆಯಡಿ ಒಂದು news story ಯನ್ನು ಬಿತ್ತರಿಸಿದ್ದಾರೆ, ನಾನು ಏನು ತಪ್ಪು ಮಾಡದಿದ್ದರೂ ಕೂಡ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ ಎಂದು ಬಹಳಷ್ಟು ಪೂರ್ಣವಾದ ವಿವರ ಇಲ್ಲಿ ಕೊಟ್ಟಿದ್ದಾರೆ. ಪ್ರಾಯಶಃ ಇದು ಕೇವಲ ಹಕ್ಕುಚ್ಯುತಿ ಅಲ್ಲ, ಅವರು ಹೇಳಿದ ಹಾಗೆ, ತೇಜೋವಧೆ, ಮಾನಹಾನಿಯೂ ಕೂಡ ಆಗಿರುವ ಬಗ್ಗೆ ಅವರು ವಿವರವಾಗಿ ಹೇಳಿದರು. ಅವರು ಹೇಳಿದ

ಹಾಗೆ ಬಹಳಷ್ಟು ಶಾಸಕರಿಗೆ ಈ ಒಂದು ಪರಿಸ್ಥಿತಿ ಬಂದಿರಬಹುದು. Natural Justice ಎನ್ನುವ ಒಂದು ಪದವನ್ನು ನಾವು ಮತ್ತೆ ಮತ್ತೆ ಹೇಳುತ್ತೇವೆ. ಆ ವರದಿ ಪ್ರಕಟಿಸುವುದಕ್ಕಿಂತ ಮುಂಚೆ ಸಿ.ಟಿ. ರವಿಯವರನ್ನು ಒಂದು ಸಲ ಕೇಳಿ ಸತ್ಯಾಸತ್ಯತೆ ನೋಡಿದ್ದರೆ ಬಹುಶಃ ಈ ವಿಚಾರ ಇಲ್ಲಿ ಪ್ರಸ್ತಾಪಿಸತಕ್ಕಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಅದಕ್ಕೋಸ್ಕರವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಒಂದು ಜವಾಬ್ದಾರಿಯುತ ನಡವಳಿಕೆ ಇರಬೇಕೆಂದು ಇವತ್ತು ಸಾಮಾನ್ಯ ವ್ಯಕ್ತಿಯೂ ಬಯಸುತ್ತಾನೆ. ಒಂದು ಸಾರಿ paper or TV channel ನಲ್ಲಿ ಬಂದರೆ ಮಾರನೇ ದಿವಸ ಓಡಾಡುವುದಕ್ಕೆ ನಮಗೆ ಒಂದು ರೀತಿಯ ಸಂಶಯ ಕಾಡುತ್ತದೆ, ಎಲ್ಲಾ ನಮ್ಮನ್ನೇ ನೋಡುತ್ತಿದ್ದಾರೇನೋ, ಅವರು ಅದನ್ನು ನೋಡಿ ಬಿಟ್ಟಿದ್ದಾರೇನೋ, ಅವರು ಅದನ್ನು ಓದಿ ಬಿಟ್ಟಿದ್ದಾರೇನೋ, traffic signal ನಲ್ಲಿ ನಿಂತು ಯಾರೋ ಒಬ್ಬರು ನಮ್ಮನ್ನು ನೋಡಿದರೆ ಓಹೋ! ಅದಕ್ಕೋಸ್ಕರ ನಮ್ಮನ್ನು ನೋಡುತ್ತಿದ್ದಾರೆ ಎನ್ನುವ ಸ್ಥಿತಿ ಬರುತ್ತದೆ. ಅದು ಸೈಕಾಲಜಿ ಅಲ್ಲ, ಅದು natural ಒಂದು ತರಹ ಭಾವನೆ ಬರುತ್ತದೆ.

ಶ್ರೀ ಸಿ.ಟಿ.ರವಿ:– ಇದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಮೂರು ದಿವಸಗಳ ಹಿಂದೆ ನಮ್ಮ ರಾಜಕೀಯ ವಿರೋಧಿಗಳು, "ಸಿ.ಟಿ. ರವಿಯುವರ scandal ಇಂಥ ತಾರೀಖು ಇಂಥ ಟಿ.ವಿ.ಯಲ್ಲಿ ಹತ್ತು ಗಂಟೆಗೆ ಪ್ರಕಟವಾಗುತ್ತದೆ ತಾವು ಎಲ್ಲರೂ ನೋಡಿ" ಎಂದು ಎಲ್ಲರಿಗೂ SMS ಮೆಸೇಜ್ ಕಳುಹಿಸುತ್ತಾರೆ. ಅಂದರೆ, ಮೂರು ದಿನ ಮುಂಚೆ ಇವರಿಗೆ SMS ಅವರು ಕೊಡುತ್ತಾರೆಂದರೆ, ಇದು 100% package story. ನನ್ನ ತಪ್ಪಿದ್ದರೆ ತನಿಖೆ ಮಾಡಿಸಿ ಇಲ್ಲಿಯೇ ನೇತುಹಾಕಿ. ನಾನು ಅದನ್ನು ಒಪ್ಪುವುದಕ್ಕೆ ತಯಾರಿದ್ದೇನೆ. ಆದರೆ, ತಪ್ಪಿಲ್ಲದೆ ಏನೂ ಇಲ್ಲದೇ ನನ್ನನ್ನು ಅಪರಾಧಿ ಎಂದು ಬಿಂಬಿಸುವುದನ್ನು ನಾನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್:– ಇದನ್ನು ಇನ್ನಷ್ಟು ಲಂಬಿಸದೇ ಅವರ ಕೋರಿಕೆ ಏನು ಇದೆ...

ಶ್ರೀ ಹೆಚ್.ಡಿ. ರೇವಣ್ಣ:– ಪತ್ರಿಕೆಗಳಲ್ಲಿ ಬರೆಯುವುದನ್ನು ನಾವು ತಡೆಹಿಡಿಯುವುದಕ್ಕಾಗಲ್ಲ. ಈಗ ಉದಾಹರಣೆಗೆ ಹೇಳುವುದಾದರೆ, ನಮ್ಮ ಮಾಜಿ ಮುಖ್ಯಮಂತ್ರಿಗಳು ಹಿರಿಯರು ಇಲ್ಲಿಯೇ ಇದ್ದಾರೆ. ದೇವೇಗೌಡರದ್ದು 80 ಎಕರೆ ಬೆಳಗ್ಗೆ ಮುಟ್ಟುಗೋಲು ಹಾಕಿಕೊಳ್ಳುತ್ತೇನೆಂದು ದೆಹಲಿಯಲ್ಲಿ ಹೇಳಿದರು. ಅದಕ್ಕೆ ಅಸೆಂಬ್ಲಿಯಲ್ಲಿ ಏನಾದರೂ ನಾವು ತಂದಿದ್ದೇವೆಯೇ? ರವಿಯವರು ಮಾಡಲಿ, ನಾನೇನು ಬೇಡ ಎನ್ನುವುದಿಲ್ಲ. Court ನಲ್ಲಿ contempt ಹಾಕಲಿ, ವಿಧಾನ ಸಭೆಯಲ್ಲಿ ಮಾಧ್ಯಮದವರು ಬಂದು ಇಲ್ಲಿ ನಿಂತು ಮಾತನಾಡುವುದಕ್ಕೆ ಅವಕಾಶವಿದೆಯೇ? ಇನ್ನೊಂದು ಕೆಲಸ ಮಾಡಿ ಮಾಧ್ಯಮದವರಿಗೆ ಇಲ್ಲಿ ಒಂದು ಚೇರ್ ಕೊಟ್ಟುಬಿಟ್ಟು ಅವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾಧ್ಯಮದವರು ಬರೆಯುತ್ತಾರೆ, ಬರೆದಿರುವುದು ಸರಿಯಲ್ಲ ಎಂದರೆ contempt ಹಾಕಿ ಬೇಕಾದರೆ ಅವರ ಮೇಲೆ defamation ಹಾಕಿ.

ಶ್ರೀ ಸಿ.ಟಿ.ರವಿ:– ನಾನು ಶಾಸಕನಾಗಿ ಕರ್ತವ್ಯ ನಿರ್ವಹಿಸುವುದಕ್ಕೆ ಕಷ್ಟವಾಗುತ್ತದೆ. ಅವರೂ ಒಬ್ಬ ಶಾಸಕರು. ಇಲ್ಲಿ ಏನಾಗಿದೆ ಎಂದರೆ, ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಒಂದು ನಿರ್ಣಯ ತೆಗೆದುಕೊಂಡಿದ್ದೆ. ಆ ನಿರ್ಣಯವನ್ನು ಪ್ರಶ್ನೆ ಮಾಡಿದ್ದಾರೆ. ರೇವಣ್ಣನವರೇ ನೀವೂ ಸಹ ಶಾಸಕರು.

ಡಾ: ಎಂ.ಸಿ. ಸುಧಾಕರ್:– ಆಧಾರಗಳಿದ್ದರೆ ಪತ್ರಿಕೆಯಲ್ಲಿ ಬರೆಯತಕ್ಕಂಥದ್ದು ಸರಿಯಿದೆ. ಆಧಾರರಹಿತವಾಗಿ ಬರೆಯತಕ್ಕಂಥದ್ದು ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ಅಥವಾ ನಡವಳಿಕೆಗೆ ಕಪ್ಪುಚುಕ್ಕೆ ತರತಕ್ಕಂಥದ್ದು ಸರಿಯಲ್ಲ. ಇಲ್ಲಿ ಇರತಕ್ಕಂಥವರೆಲ್ಲರೂ ಶಾಸಕರು. ನಾವೆಲ್ಲಾ ಸಮಾಜದಲ್ಲಿ ಗೌರವವಾಗಿ ಬದುಕಬೇಕೆನ್ನುವ ಇಚ್ಛೆವುಳ್ಳವರು. ಏನೇನೋ ಬರೆಯುತ್ತಾರೆಂದು ನಾವು ತಲೆತಗ್ಗಿಸಿಕೊಂಡು ಇರಲಿಕ್ಕೆ ಆಗುವುದಿಲ್ಲ. ದಯವಿಟ್ಟು ಇದು ನಮ್ಮೆಲ್ಲರ ಗೌರವಕ್ಕೆ ಸಂಬಂಧಪಟ್ಟದ್ದಾಗಿದೆ. ಮಾನ್ಯ ರವಿಯವರು ಹೇಳಿರುವುದು ಬಹಳ ಸೂಕ್ತವಾದ ವಿಚಾರ. ಆಧಾರಗಳಿದ್ದಾಗ ಹೇಳುವುದರಲ್ಲಿ ಅರ್ಥವಿದೆ. ಆಧಾರರಹಿತವಾಗಿ ಇವತ್ತು

ಅವರು ಹೇಳಿದ ಹಾಗೆ ಅದೊಂದು industry ಆಗಿಬಿಟ್ಟಿದೆ. ಇವತ್ತು ethical ಆಗಿ ಇಲ್ಲ. Journalism ನಲ್ಲಿ yellow journalism ಎನ್ನುವುದು ಎಲ್ಲರಿಗೂ ಗೊತ್ತಿದೆ. ಯಾವ ರೀತಿಯಾಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ದೊಡ್ಡ ದೊಡ್ಡ ಪತ್ರಿಕೆ ಇರಬಹುದು, TV Channels ಈ ಮಟ್ಟಕ್ಕೆ ಹೋಗುತ್ತಿರುವುದು ದುರಾದೃಷ್ಟ. ಅಣ್ಣಾ ಹಜಾರೆ ಮತ್ತೊಬ್ಬರ ಬಗ್ಗೆ ಯಾವ ರೀತಿಯಾಗಿ ಒಳ್ಳೆಯ ರೀತಿಯಲ್ಲಿ ಬಿಂಬಿಸತಕ್ಕಂಥದ್ದು ಇದೆ, ಅದೇ ರೀತಿಯಾಗಿ ಬೇರೆ ವಿಚಾರಗಳನ್ನು ಸತ್ಯಾಸತ್ಯತೆಗಳನ್ನು ಅರ್ಥ ಮಾಡಿಕೊಳ್ಳದೆ ಅದನ್ನು ಈ ರೀತಿ ಮಾಡಿದಾಗ ಒಬ್ಬ ವ್ಯಕ್ತಿಯ ಪರಿಸ್ಥಿತಿ ಏನಾಗುತ್ತದೆ, ಸಾರ್ವಜನಿಕ ಬದುಕಿನಲ್ಲಿರುವಂಥ ವ್ಯಕ್ತಿಗಳ ಬಗ್ಗೆ ಯೋಚನೆ ಮಾಡಿ ಮಾಡುವುದು ಸೂಕ್ತ. ರೇವಣ್ಣನವರು ಇದನ್ನು ಯಾವ ರೀತಿ ಹೇಳುತ್ತಾರೋ ನನಗೆ ಗೊತ್ತಿಲ್ಲ. ಆದರೆ, ಆಧಾರ ರಹಿತವಾಗಿ ಪ್ರಕಟಿಸುವುದು ತಪ್ಪು, ಅದನ್ನು ನಾವೆಲ್ಲರೂ ವಿರೋಧಿಸುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ:– ರೇವಣ್ಣನವರು ಯಾವ ರೀತಿ ಹೇಳುತ್ತಾರೆಂದರೆ,

ಶ್ರೀ ಡಿ.ಎನ್. ಜೀವರಾಜ್:– ರೇವಣ್ಣನವರು ಈ ವಿಷಯಕ್ಕೂ ಆ ವಿಷಯಕ್ಕೂ ಏಕೆ ಟ್ಯಾಗ್ ಹಾಕುತ್ತಾರೆ?

ಶ್ರೀ ಹೆಚ್.ಡಿ. ರೇವಣ್ಣ:– ನಾನು ಟ್ಯಾಗ್ ಹಾಕುತ್ತಿಲ್ಲ. ಒಂದು ನಿಮಿಷ ಅವಕಾಶ ಕೊಡಿ. ಪತ್ರಿಕಾ ರಂಗಕ್ಕೆ ಒಂದು ಕಡೆ ಸ್ವಾತಂತ್ರ್ಯ ಇರಬೇಕೆಂದು ಹೇಳುತ್ತೀರಿ. ಪತ್ರಿಕೆಯವರು ಬರೆಯುವುದಕ್ಕೇ ಇರುತ್ತಾರೆ. ಪತ್ರಿಕೆಯವರು ಸಭೆಗೆ ಬಂದು ಹೇಳುವುದಕ್ಕಾಗುತ್ತದೆಯೇ? ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ತಾವು ಇದಕ್ಕೆಲ್ಲಾ ಅವಕಾಶ ಕೊಡಬಾರದು.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ರವಿಯವರು ನಿರ್ದಿಷ್ಟವಾದ ಒಂದು ಪ್ರಕರಣದ ಬಗ್ಗೆ ಹೇಳಿದ್ದಾರೆ. ಅದನ್ನು ತಾವು ಹಕ್ಕುಚ್ಯುತಿ ಸಮಿತಿಗೆ ದಯವಿಟ್ಟು ಒಪ್ಪಿಸಿ.

ಅಧ್ಯಕ್ಷರು:– ಮಾನ್ಯ ಸಿ.ಟಿ. ರವಿಯವರು ಇಲ್ಲಿ ಪ್ರಸ್ತಾಪಿಸಿದ ವಿಚಾರ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಮತ್ತು

ಇದು ಮೋಲ್ನಾಟಕ್ಕೆ ಹಕ್ಕುಚ್ಯುತಿ ಆದಂತೆ ಕಂಡು ಬರುವುದರಿಂದ ಇದನ್ನು ಸದನದ ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲು ತೀರ್ಮಾನಿಸಿದ್ದೇನೆ. ಇದನ್ನು ಹಕ್ಕುಚ್ಯುತಿ ಸಮಿತಿಗೆ ಮುಂದಿನ ವಿಚಾರಕ್ಕೆ ಕಳುಹಿಸಿ ಕೊಡಲಾಗಿದೆ. ಈಗ ಸದನವನ್ನು 3–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 06 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3–00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ದಯಮಾಡಿ ಶೂನ್ಯ ವೇಳೆಗೆ ಅವಕಾಶ ಮಾಡಿಕೊಡಬೇಕು. ನಾವು ನಿನ್ನೆಯಿಂದ ಕಾಯುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ಶೂನ್ಯವೇಳೆ ಒಂದು ಮುಗಿಸಲೇ?

ಶ್ರೀ ಹೆಚ್.ಸಿ. ಬಾಲಕೃಷ್ಣ:– ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ ಹತ್ತು ನಿಮಿಷ ಶೂನ್ಯ ವೇಳೆಯನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕು.

ಶ್ರೀ ಸಿದ್ದರಾಮಯ್ಯ:– ನಿಯಮ 60ರ ಅಡಿಯಲ್ಲಿ ನಾವು ನೋಟೀಸ್ ಕೊಟ್ಟಿದ್ದೇವೆ. ಶೂನ್ಯ ವೇಳೆ ತೆಗೆದುಕೊಳ್ಳಲಿ, ನಾನು ಬೇಡ ಎಂದು ಹೇಳುವುದಿಲ್ಲ. ಈಗಾಗಲೇ ಮೂರು ಗಂಟೆಯ ಮೇಲೆ ಪ್ರಶ್ನೋತ್ತರ ಆಗಿದೆ. ನಾವು ಇದನ್ನು ಯಾವಾಗ ಚರ್ಚೆ ಮಾಡುವುದು?

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುತ್ತಿದ್ದೇವೆ. ಶೂನ್ಯ ವೇಳೆ ಅರ್ಧ ಗಂಟೆಯಲ್ಲಿ ಮುಗಿಯುತ್ತದೆ.